ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳಲ್ಲಿರುವ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ವಿವರಗಳು :

ಬಾಗಲಕೋಟೆ ಜಿಲ್ಲೆ

1. ಮೆ : ಕನ್ನೋರಿಯಾ ಇಂಡಸ್ಟ್ರೀಸ್ ಲಿ. ಬಾಗಲಕೋಟೆ
2. ಮೆ : ಕಾಟ್ವಾ ಉದ್ಯೋಗ್ ಲಿ. ಕಲಾದಗಿ
3. ಮೆ : ಜೆಮ್ ಗ್ರಾನೈಟ್ಸ್, ಇಲಕಲ್
4. ಮೆ : ಜೆಮ್ ಶುಗರ್ಸ್, ಕುಂದರಗಿ
5. ಮೆ : ನಿರಾಣಿ ಶುಗರ್ಸ್, ಮುಧೋಳ
6. ಮೆ : ಜಮಖಂಡಿ ಶುಗರ್ಸ್, ಹಿರೇಪಡಸಲಗಿ
7. ಮೆ : ಪ್ರಭುಲಿಂಗೇಶ್ವರ ಶುಗರ್ಸ್, ಜಮಖಂಡಿ
8. ಮೆ : ಗೋದಾವರಿ ಶುಗರ್ಸ್, ಲಿ. ಸಮೀರವಾಡಿ
9. ಮೆ : ರಥತರ ಸಹಕಾರಿ ಸಕ್ಕರೆ ಕಾರ್ಖಾನೆ ನಿ. ರನ್ನ ನಗರ ಮುಧೋಳ
10. ಮೆ : ಸಹಕಾರಿ ನೂಲಿನ ನಿ. ಬನಹಟ್ಟಿ
11. ಮೆ : ಡೆಂಪೋ ಡೇರಿ ಇಂಡಸ್ಟ್ರೀಸ್ ಲಿ. ಆಸಂಗಿ

ಬಿಜಾಪುರ ಜಿಲ್ಲೆ

1. ಮೆ : ಗೌರಿ ಸ್ಪಿನ್ನಿಂಗ್ ಮಿಲ್ ಪ್ರೈವೇಟ್ ಲಿಮಿಟೆಡ್, ಬಿಜಾಪುರ
2. ಮೆ : ನಂದಿ ಕೋ-ಆಪರೇಟೀವ್ ಶುಗರ್ ಫ್ಯಾಕ್ಟರಿ ಗಲಗಲಿ ತಾ : ಬಿಜಾಪುರ
3. ಮೆ : ಜ್ಞಾನಯೋಗಿ ಶ್ರೀ ಶಿವಕುಮಾರ ಸ್ವಾಮೀಜಿ ಶುಗರ್ಸ್ ಲಿಮಿಟೆಡ್, ಹಿರೆಬೇಟನೂರು, ತಾ : ಇಂಡಿ

4641 (5267) ಶ್ರೀ ಬಂಡೆಪ್ಪ ಕಾಶೆಂಪುರ್ (ಬೀದರ್) :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೀದರ್ ನಗರದಲ್ಲಿ ಬೆಗ್ಗರ್ (ಭಿಕ್ಷುಕರು) ಗಳಿಗೆ ಪರಿಹಾರವಾಗಿ ನಿವೇಶನ (Relief home) ವನ್ನು ದಿನ ನಿತ್ಯ ಭಿಕ್ಷುಕರ ಸಂಖ್ಯೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಹಂಚಲು ಸರ್ಕಾರ ಕ್ರಮ ಕೈಗೊಳ್ಳುವುದೆ?

2) ಇಲ್ಲದಿದ್ದರೆ, Rehabilitation ಸರ್ಕಾರ ಈ ಕಾರ್ಯಕ್ರಮವನ್ನು ಯಾವಾಗ ಕೈಗೆತ್ತಿಕೊಳ್ಳುವುದು?

ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

1, 2) ಬೀದರ್ ನಗರದಲ್ಲಿ ನಿರಾಶ್ರಿತರು ಪರಿಹಾರ ಕೇಂದ್ರವನ್ನು ಇದುವರೆವಿಗೂ ಪ್ರಾರಂಭಿಸಿರುವುದಿಲ್ಲ. ಇಲ್ಲಿ ನಿರಾಶ್ರಿತರ ಪರಿಹಾರ ಕೇಂದ್ರವನ್ನು ಪ್ರಾರಂಭಿಸುವ ಬಗ್ಗೆ ಜಿಲ್ಲಾಧಿಕಾರಿಗಳಿಂದ ವರದಿ ಪಡೆದು ಪರಿಶೀಲಿಸಲಾಗುವುದು.

4643 (5479) ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ) :– ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಎಷ್ಟು ಪಶುವೈದ್ಯ ಆಸ್ಪತ್ರೆಗಳಿವೆ; ಎಷ್ಟು ಜನ ಪಶುವೈದ್ಯರಿದ್ದಾರೆ; ಈ ಪಶುವೈದ್ಯ ಕೇಂದ್ರಗಳನ್ನು ಸ್ಥಳಾಂತರಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; ಹಾಗಿದ್ದಲ್ಲಿ ಸ್ಥಳಾಂತರಿಸಲು ಕಾರಣವೇನು; (ಪೂರ್ಣ ವಿವರ ನೀಡುವುದು)?

ಶ್ರೀ ಮೆರಾಜುದ್ದೀನ್ ಎನ್. ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) ಕೊಡಗು ಜಿಲ್ಲೆಯಲ್ಲಿ ಒಟ್ಟು 77 ವಿವಿಧ ಪಶುವೈದ್ಯಕೀಯ ಸಂಸ್ಥೆಗಳು ಇರುತ್ತವೆ. ಇವುಗಳ ವಿವರ ಕೆಳಕಂಡಂತಿದೆ :–

ಪಶು ಆಸ್ಪತ್ರೆ	6
ಪಶು ಚಿಕಿತ್ಸಾಲಯ	25
ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ	22
ಸಂಚಾರಿ ಪಶು ಚಿಕಿತ್ಸಾಲಯ	3
ಪ್ರಧಾನ ಗ್ರಾಮೀಣ ಯೋಜನೆ	3
ಪ್ರಧಾನ ಗ್ರಾಮೀಣ ಉಪ ಕೇಂದ್ರ	18
ಒಟ್ಟು	**77**

ಜಿಲ್ಲೆಯಲ್ಲಿ 24 ಪಶುವೈದ್ಯಾಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.

2003ರ ಜಾನುವಾರು ಗಣತಿ ಪ್ರಕಾರ ಜಿಲ್ಲೆಯಲ್ಲಿ ಒಟ್ಟು 1,56,047 ಜಾನುವಾರು ಘಟಕಗಳಿದ್ದು, ಇವುಗಳಿಗೆ ಒಟ್ಟು 31 ಪಶುವೈದ್ಯಕೀಯ ಸಂಸ್ಥೆಗಳ ಅವಶ್ಯಕತೆಯಿರುತ್ತದೆ. ಈ ಜಿಲ್ಲೆಯಲ್ಲಿ ಅಗತ್ಯಕ್ಕಿಂತ ಹೆಚ್ಚುವರಿ ಪಶುವೈದ್ಯಕೀಯ ಸಂಸ್ಥೆಗಳು ಇರುತ್ತವೆ.

ಡಾ॥ ಡಿ.ಎಂ. ನಂಜುಂಡಪ್ಪ ನವರ ಪ್ರಾದೇಶಿಕ ಅಸಮತೋಲನ ವರದಿಯ ಶಿಫಾರಸ್ಸಿನಂತೆ ಅಗತ್ಯಕ್ಕಿಂತ ಹೆಚ್ಚು ಪಶುವೈದ್ಯಕೀಯ ಸಂಸ್ಥೆಗಳು ಇರುವ ಜಿಲ್ಲೆಗಳಿಂದ, ಕೊರತೆಯಿರುವ ಜಿಲ್ಲೆಗಳಿಗೆ ಸ್ಥಳಾಂತರಿಸಿ ಅಸಮತೋಲನ ನಿವಾರಿಸಲು ಶಿಫಾರಸ್ಸು ಇದೆ. ಹೆಚ್ಚುವರಿ ಸಂಸ್ಥೆಗಳನ್ನು ಸ್ಥಳಾಂತರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.